IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ನೇಮಿಚಂದ್ರ ಅವರ ಕಥೆ: ಸ್ತ್ರೀ ಸಮಾನತೆ

ಎಂ. ಶೆಲ್ವಿಬಾಲಕೃಷ್ಣನ್
(ಸಹಾಯಕ ಪ್ರಾಧ್ಯಾಪಕರು)
ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್
ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್,
ಕ್ರೈಸ್ಟ್ ನಗರ, ಹುಲ್ಲಹಳ್ಳಿ,
ಬೇಗೂರು ಕೊಪ್ಪ ರೋಡ್,
ಸಕಲವಾರ ಪೋಸ್ಟ್
ಬೆಂಗಳೂರು–560083

ಪೀಠಿಕೆ: ಸ್ವಾತಂತ್ರ್ಯ ಪೂರ್ವ ಘಟ್ಟದ ಕಥಾ ಸಾಹಿತ್ಯವು ಮಾನವ ಮತ್ತು ಸಮಾಜ ಕೇಂದ್ರೀಕೃತವಾಗಿದ್ದು, ಇದರಲ್ಲಿ ಮುಖ್ಯವಾಗಿ ನಾವು ಈ ಎರಡರ ಸಂಬಂಧಗಳ ವಾಸ್ತವ ವಿಶ್ಲೇಷಣೆ ಆದರ್ಶ ಮಾನವನ ವ್ಯಕ್ತಿತ್ವದ ನಿರ್ಮಾಣದ ವಿಚಾರಗಳನ್ನು ಹುಡುಕುವುದೇ ಈ ಕಾಲಘಟ್ಟದ ಕಥಾಸಾಹಿತ್ಯದ ಮುಖ್ಯ ಕಾಳಜಿಯಾಗಿತ್ತು.

ಸ್ವಾತಂತ್ರ್ಯೋತ್ತರದ ಕಥಾ ಸಾಹಿತ್ಯದಲ್ಲಿ ಪ್ರಮುಖವಾಗಿ ನವ್ಯ ಕಥಾ ಸಾಹಿತ್ಯ, ನವ್ಯೋತ್ತರ ಕಥಾ ಸಾಹಿತ್ಯ, ದಲಿತ ಬಂಡಾಯ ಎಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗುರ್ತಿಸಲಾಗಿದ್ದು, ಇಲ್ಲಿ ಬಹಳ ಪ್ರಮುಖವಾಗಿ ಮಾನವನ ಮನಸ್ಸು ಅವನ ಜೀವನ ಕ್ರಮಗಳು, ಅನುಭವಗಳು ನೋವು ನಲಿವುಗಳು ಮುಂತಾದ ಅಂಶಗಳಿಗೆ ಸಂಬಂಧಿಸಿದೆ. ಈ ಸಂದರ್ಭದಲ್ಲಿ ನಾವು ಬಹಳಷ್ಟು ಉತ್ತಮವಾಗಿ ಕಥೆಗಳನ್ನು ಬರೆದಿರುವಂತಹ ಕಥೆಗಾರ್ತಿಯರನ್ನು ನೋಡಬಹುದಾಗಿದೆ. ಪ್ರಮುಖರಾದ ಕಥೆಗಾರ್ತಿಯರಲ್ಲಿ ನೇಮಿಚಂದ್ರರವರು ಕೂಡ ಒಬ್ಬರು ಎಂಬುದು ಹರ್ಷದಾಯಕ ಸಂಗತಿಯಾಗಿರುತ್ತದೆ.

ನೇಮಿಚಂದ್ರರವರ ಕಿರು ಪರಿಚಯ: ಕಥೆಗಾರ್ತಿಯಾದ ನೇಮಿಚಂದ್ರ ವೃತ್ತಿಯಿಂದ ಇಂಜಿನಿಯರ್, ಬಿ.ಇ ಮತ್ತು ಎಂ.ಎಸ್ (ಇಂಜಿನಿಯರಿಂಗ್) ಪದವಿ ಪಡೆದು ಪ್ರಸ್ತುತ ಹೆಚ್.ಎ.ಎಲ್ ಸಂಸ್ಥೆಯ 'ಹೆಲಿಕ್ಯಾಪ್ಟರ್ ಡಿಸೈನ್ ಬ್ಯೂರೋದಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್(ಡಿಸೈನ್)' ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ ನೇಮಿಚಂದ್ರರ ಕಥೆಗಳು, ಮಹಿಳಾ ಅಧ್ಯಯನ, ಮುಂತಾದವು ಆಗಿದೆ.

ಪ್ರಬಂಧದ ಬೆಳವಣಿಗೆ: ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಹೆಚ್ಚು ಹೆಚ್ಚಾಗಿ ಕಥೆಗಳನ್ನು ಬರೆಯುತ್ತಾ ಬಂದಿದ್ದಾರೆ. ಅವರು ತಮ್ಮ ಬದುಕಿನ ನೆಲೆಯಲ್ಲಿ ಕಂಡುಕೊಂಡಿರುವಂತಹ ಸ್ವ-ಅನುಭವಗಳನ್ನು ಬರಹಗಳಲ್ಲಿ ಅಭಿವ್ಯಕ್ತಪಡಿಸುತ್ತಾ ಪುಸ್ತಕ ರೂಪದಲ್ಲಿ ಪ್ರಕಟಗೊಳಿಸುತ್ತಿದ್ದಾರೆ. ಇದನ್ನೇ ನಾವು ಮಹಿಳಾ ಕಥಾ ಸಾಹಿತ್ಯವೆಂದು ಕರೆಯಲಾಗುತ್ತಿದೆ.

ನೇಮಿಚಂದ್ರರವರ ಕಥಾ ಸಾಹಿತ್ಯದಲ್ಲಿ ಬಹಳ ಪ್ರಮುಖವಾಗಿ ಬದುಕನ್ನು ಮನಸ್ಸಿನಿಂದ ನೋಡುವಂತಹ ಮನೋಭಾವ ಹಾಗೂ ಪ್ರಾಮಾಣಿಕವಾದ ಅಭಿವ್ಯಕ್ತ ಪ್ರಧಾನವಾಗಿದ್ದು, ಇತ್ತೀಚಿಗೆ ಸ್ತ್ರೀ ಲೋಕದಲ್ಲಿ ಅವರವರ ಬದುಕಿಗೆ ಸಂಬಂಧಿಸಿದಂತೆ ಆಂತರಿಕ ಮತ್ತು ಬಾಹ್ಯ ಜೀವನ, ಹಾಗೂ ಹೆಣ್ಣಿನ ಅಂತರ್ಮುಖತೆಯ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ನಾವು ಇವರ ಕಥೆಗಳಲ್ಲಿ ಕಾಣಬಹುದಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ವೈಯಕ್ತಿಕ ಜೀವನದಲ್ಲಿ ಕಂಡು ಬರುವಂತಹ ಸಮಸ್ಯೆಗಳನ್ನು ಹೇಗೆ ಎದುರಿಸುತ್ತಾಳೆ. ಮಹಿಳೆಯು ಈ ಪ್ರಪಂಚದಲ್ಲಿ ತಾನು ಬದುಕುವುದಕ್ಕಿಂತ ಭಿನ್ನವಾದ, ಹೊಸ ಪ್ರಪಂಚವನ್ನು ಸೃಷ್ಟಿಸುವ ಪ್ರಯತ್ನವನ್ನು ಮಾಡಲು ಮುಂದಾಗುತ್ತಾಳೆ. ಯಾವುದೇ ರೀತಿಯಾದಂತಹ ಅರ್ಥವಿರದ ತನ್ನ ಒಳ ಬದುಕನ್ನು ಒಪ್ಪಿಕೊಳ್ಳಲಾಗದ ಸಂದರ್ಭದಲ್ಲಿ ಕಥೆಗಾರ್ತಿ ತನ್ನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಕಾರಣದಿಂದ ತಾನು ಆಯ್ಕೆ ಮಾಡಿಕೊಂಡ ಮಾರ್ಗವೇ ಈ ಬರವಣಿಗೆ. ಬರವಣಿಗೆಯ ಮೂಲಕ ಕಥೆಗಳಲ್ಲಿ ಮುಖ್ಯವಾಗಿ ಕಥೆಗಾರ್ತಿಯಾದ ನೇಮಿಚಂದ್ರರವರು ತನ್ನ ಭಾವನೆಗಳಿಗೆ ಉಸಿರನ್ನು ತುಂಬುವ ಪ್ರಯತ್ನವನ್ನು ಮಾಡುತ್ತಾರೆ. ಕೆಲವೊಮ್ಮೆ ಅವರು ಬರೆದಂತಹ ಕಥೆಗಳು ಕಲ್ಪನಾಮಯವಾಗುತ್ತದೆ, ಕಲ್ಪನಾಮಯ ಲೋಕದಲ್ಲಾದರೂ ಒಂದು ಹೆಣ್ಣು ತನ್ನ ಆಸೆ-ಆಕಾಂಕ್ಷೆಗಳನ್ನು ಪೂರ್ತಿ ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗುವಂತೆ ಮಾಡಿರುತ್ತಾರೆ.

ನೇಮಿಚಂದ್ರರವರ ಬರವಣಿಗೆಯೂ ವಿಶಿಷ್ಟ ಶೈಲಿಯಲ್ಲಿ ವಿಭಿನ್ನವಾಗಿದ್ದು, ತಾವು ಹೇಳ ಬಯಸುವ ಸೂಕ್ಷ್ಮವಾದ ಸಂಗತಿಗಳನ್ನು ಮನ ಮುಟ್ಟುವಂತೆ ಸಂದೇಶಗಳನ್ನು, ವಿಭಿನ್ನವಾದ ನೆಲೆಗಳಲ್ಲಿ ಹೇಳುವ ಪ್ರಯತ್ನವನ್ನು ನೇಮಿಚಂದ್ರರವರು ಮಾಡಿರುತ್ತಾರೆ. ಪ್ರಮುಖವಾಗಿ ತನ್ನ ಭಾವನೆಗಳಿಗೆ ರೂಪು ಕೊಡಲು ತಮ್ಮನ್ನು ತಾವು ತೊಡಗಿಸಿಕೊಂಡು ಸಹಜವಾದ ಲೇಖನ ಶಕ್ತಿಯಲ್ಲಿ ವಿವೇಚನೆಗಳನ್ನು ಸೇರಿಸಿಕೊಂಡಿರುತ್ತಾರೆ. ಗಂಡು-ಹೆಣ್ಣು ಕೂಡಿರುವ ಒಂದು ಲೋಕದಲ್ಲಿ ಪ್ರಮುಖವಾಗಿ ಸ್ವಾರಸ್ಯದ ಮಾತುಗಾರಿಕೆ, ಕೆಲವೊಮ್ಮೆ ಗಾಢವಾದ ವಿಷಯದ, ಉಲ್ಲಾಸದ ಹಾಗೂ ವಿಷಾದದ ಜೊತೆಗೆ ಹಿಂಸೆಯ ಛಾಯೆಗಳು ಕಂಡು ಬರುತ್ತದೆ. ದಲಿತ ಹೆಣ್ಣು ಮಕ್ಕಳ ಜೀವನದಲ್ಲಿ ನೊಂದವರಿಗೆ ಸಾಂತ್ವನ ನೀಡುವ ವಿಚಾರ, ಮಹಿಳಾಪರ ಧ್ವನಿಯ ಅಂಶಗಳು, ಇವರ ಕಥೆಗಳಲ್ಲಿ ಎದ್ದು ಕಾಣುತ್ತವೆ.

ನೇಮಿಚಂದ್ರ ಹಾಗೂ ಕೆಲವು ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ಮುಖ್ಯವಾಗಿ ಸಮಾಜದಲ್ಲಿ ಮನುಷ್ಯನನ್ನು ಇತರೆ ಜೀವ ವರ್ಗಗಳಿಂದ ಬೇರೆ ಮಾಡಿ ನೋಡಿದಾಗ, ಅದರಂತೆ ಮನುಷ್ಯರಿಗೆ ಯಾವ ಜೀವವರ್ಗಕ್ಕೂ ಇರದ ಪ್ರಜ್ಞೆಯಿದೆ ಎಂಬುದು ಒಂದು ನೆಲೆಯಾದರೆ ಪ್ರತಿಯೊಬ್ಬ ಮನುಷ್ಯರೂ ಸ್ವತಂತ್ರರು ಎನ್ನುವುದು ಇನ್ನೊಂದು ನೆಲೆ, ಸ್ವತಂತ್ರರು ಎನ್ನುವುದಕ್ಕಿಂತ ಸ್ವಾತಂತ್ರ್ಯದ ಆಯ್ಕೆಯ ಅವಕಾಶ ಪ್ರತಿಯೊಬ್ಬ ಮನುಷ್ಯರಿಗೂ ಇರುತ್ತದೆ ಎನ್ನುವುದು ಸರ್ವಕಾಲಿಕವಾಗಿ ಹೆಚ್ಚು ಸರಿಯಲ್ಲವೇ? ಹಾಗಾಗಿ ನೇಮಿಚಂದ್ರರ ಪ್ರಮುಖ ಚಿಂತನೆಗಳು ಸಮಾಜವು ಬದಲಾಗಬೇಕು, ಸುಧಾರಿಸಬೇಕು ಎಂಬುದನ್ನು

ಪದೇ ಪದೇ ಜಪಮಾಡುತ್ತಿದೆ ನಿಜ. ಆದರೆ ಇದು ಸಾಧಿತವಾಗುವುದು ಹೇಗೆ ಎಂಬ ಕ್ರಿಯಾ ಯೋಜನೆ ಇಲ್ಲದಿದ್ದರೆ, ಹುಚ್ಚು ಬಿಡದೆ ಹೊರತು ಮದುವೆಯಾಗದು, ಮದುವೆಯಾಗದೆ ಹೊರತು ಹುಚ್ಚು ಬಿಡದು ಎಂಬ ಗಾದೆಯಂತೆ, ವಿಷ ವರ್ತುಲವೊಂದು ನಿಯಮಿತವಾಗಿ ಬಿಡುತ್ತದೆ ಹೆಣ್ಣು ಇದರ ಹೊಣೆಯನ್ನು ತಾನೇ ಹೊರಲು ಸಿದ್ಧಗೊಂಡ ಹೊರತು ಬಿಡುಗಡೆಯ ಹಾದಿ ಕಾಣಲಾರದು ಎಂಬುದನ್ನು ಅರಿತಿರುವ ಕಥೆಗಾರ್ತಿ ತಮ್ಮದೇ ಆದ ವೈಯಕ್ತಿಕ ದೃಷ್ಟಿಕೋನದ ಹಿನ್ನಲೆಯಲ್ಲಿ ಕಥೆಗಳಲ್ಲಿ ಸ್ತ್ರೀಪಾತ್ರಗಳ ಮೂಲಕ ಅಸಾಧಾರಣವಾದ ಬೆಳವಣಿಗೆ ಮತ್ತು ಬದಲಾವಣೆ ಕಂಡು ಬರುವಂತೆ ಮಾಡುವ ಮೂಲಕ ಆರಂಭದಲ್ಲಿ ಹೊಂದಾಣಿಕೆ ಮಾಡಿಕೊಂಡು ಬದುಕುತ್ತಿದ್ದ ಸ್ತ್ರೀಪಾತ್ರಗಳು ಕೊನೆ-ಕೊನೆಗೆ ಪ್ರತಿರೋಧದ ನಡುವೆ ಹೊಸದರ ಸೃಷ್ಠಿಗೆ ಕಾರಣವಾಗುವುದನ್ನು ಗುರುತಿಸಬಹುದಾಗಿದೆ.

ನೇಮಿಚಂದ್ರರವರು ಹೊಸ ಕಥಾಸಾಹಿತ್ಯದಲ್ಲಿ ವೈವಿಧ್ಯತೆ ಹಾಗೂ ಸಮೃದ್ಧತೆಯನ್ನು ತಂದುಕೊಡುವ ಮೂಲಕ ಹೊಸ ಹೊಸ ಆಯಾಮಗಳನ್ನು ಹುಡುಕಿ ಕಥೆಗಳ ಮೂಲಕ ಜನರಲ್ಲಿ ವಿಚಾರ ಪ್ರಚೋದನೆಯಾಗುವ ರೀತಿಯಲ್ಲಿ ತಮ್ಮ ಕಥಾ ತಂತ್ರವನ್ನು ರೂಪಿಸಿಕೊಳ್ಳುತ್ತಾರೆ. ಸಮಸ್ಯೆಯನ್ನು ಚಿತ್ರಿಸುವ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನಗಳು ಹೆಚ್ಚು ಬೆಳಕಿಗೆ ಬರುತ್ತಿದೆ.

ನೇಮಿಚಂದ್ರರವರ ಆಶಯವೆಂದರೆ ಇಡೀ ಮಹಿಳಾ ಸಮುದಾಯವು ಒಂದು ಸೋದರತ್ವದ ಭಾವನ್ನು ಹೊಂದಬೇಕೆಂಬುದು ಆಗಿದೆ. ಇಲ್ಲಿನ ಪ್ರೀತಿ ವಿಶ್ವಾಸಗಳು ಅಖಂಡವಾಗಿ ಇವೆಯಾದರೂ, ಔಪಚಾರಿಕವದ ಗೌರವದ ಸಂಬೋಧನೆಗಳು ಬೇಡವೆಂಬುದೂ ಇದೆ. ಕುವೆಂಪುರವರು ಹೇಳಿದಂತೆಯೇ ಇಲ್ಲಿ ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ ಎಲ್ಲರೂ ಸಮಾನರು. ಈ ವಿಚಾರದ ಹಿನ್ನಲೆಯಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸುವುದೇ ನಮ್ಮ ಕಥೆಗಾರ್ತಿಯವರ ಮೂಲ ಉದ್ದೇಶವಾಗಿರುತ್ತದೆ.

ನೇಮಿಚಂದ್ರರವರ ಕಥಾ ಸಾಹಿತ್ಯದಲ್ಲಿನ ಕೆಲವು ಆಯ್ದ ಕಥೆಗಳ ಚರ್ಚೆ :

ನೇಮಿಚಂದ್ರರವರು ಬರೆದಂತಹ ಕಥೆಗಳಲ್ಲಿ ಒಂದಾದ "ನನ್ನದಲ್ಲದ ಬದುಕಿಗಾಗಿ" ಎಂಬ ಕಥೆಯಲ್ಲಿ ಸರೂ ತನ್ನ ಗಂಡನಾದ ಅಕ್ಷಯನನ್ನು ಮದುವೆಯಾದ ಎರಡನೇ ತಿಂಗಳಲ್ಲಿಯೇ ಕಳೆದುಕೊಂಡು ದುಃಖಿತಪ್ತಳಾಗಿ, ಬಳ್ಳಾರಿ ಹುಡುಗ ರಮೇಶನನ್ನು ಮನೆಯವರ ಒತ್ತಾಯದ ಮೇರೆಗೆ ಮದುವೆಯಾಗಲು ಮನಸ್ಸಿಲ್ಲದೆ ಮನಸ್ಸಿನಿಂದ ಒಪ್ಪಲು ಮುಂದಾಗುವುದನ್ನು ಕಾಣಬಹುದಾಗಿದೆ. ಈ ಕಥೆಯಲ್ಲಿ ಒಬ್ಬ ಹೆಣ್ಣು ಮಗಳು ತನ್ನ ಅಂತರಂಗದ ಪ್ರತಿಕ್ರಿಯೆ ಒಂದು ಮುಖ್ಯ ಸಂವಾದವನ್ನು ಎತ್ತಿಹಿಡಿಯುವುದನ್ನು ನೋಡಬಹುದಾಗಿದೆ. ಸಮಾಜದಲ್ಲಿ ಕಂಡು ಬರುವ ಹಿಂಸೆ, ಕ್ರೌರ್ಯ, ದೌರ್ಜನ್ಯ, ಶೋಷಣೆಯ ವಿವಿಧ ಬಗೆಯ ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ಸೆರೆ ಹಿಡಿದಿದೆ ಎಂಬುದನ್ನು ಗುರುತಿಸಬಹುದಾಗಿದೆ.

"ಎಲ್ಲಾ ಮಗಳ ಮದುವೆಗಾಗಿ" ಎನ್ನುವಂತಹ ಕಥೆಯಲ್ಲಿ ಮೀರಾಚಾಂದಿನಿಯ ಮೊದಲ ಮಗಳಾದ 23(ಇಪ್ಪತ್ತಮೂರು) ವರ್ಷದ ಉಷಾ ಮದುವೆಯ ವಿಚಾರದ ಹಿನ್ನಲೆಯಲ್ಲಿ ಪೆಡಂಭೂತವಾಗಿ ಕಾಡುವ ವರದಕ್ಷಿಣೆ ಎಂಬ ಪಿಡುಗಿನಿಂದ ಕಣ್ಣು ಮುಚ್ಚುತ್ತಾಳೆ. ಎರಡನೆ ಮಗಳ ಮದುವೆಗಾಗಿ ತನ್ನ ಮೂತ್ರಪಿಂಡವನ್ನು ಮಾರಾಟ ಮಾಡಿ ಮದುವೆ ಮಾಡಲು ಮುಂದಾಗುವುದು ಒಂದು ಶೋಚನೀಯ ಸಂಗತಿಯೇ ಸರಿ. ಕಥೆಗಾರ್ತಿಯು ಹೇಳಿದಂತೆ ಮೇ ತಿಂಗಳಲ್ಲಿ ದಿಲ್ಲಿಯಲ್ಲಿ ನಡೆದಂತಹ ಘಟನೆ ಆರು ವರ್ಷದ ಬಾಲೆ ರೇಖಾ ಈಕೆಯ ತಂದೆ ಬಡಗಿ ರಾಧೇಶ್ಯಾಮ್ ಮತ್ತು ತಾಯಿಯಾದ ಲಕ್ಷ್ಮೀ ಒಮ್ಮೆ ತಾಯಿಯ ಅಲಕ್ಷ್ಯದಲ್ಲಿ ಕೀವು ತುಂಬಿ ಗ್ಯಾಂಗ್ರೀನ್ ಆಗಿ, ಬಲಗಾಲನ್ನು ಕಳೆದುಕೊಂಡ ಸಂದರ್ಭದ ಹಿನ್ನಲೆಯಲ್ಲಿ ಸಮಾಜಕ್ಕೆ ಹೆದರಿದ ಪೋಷಕರು ಮುದ್ದು ರೇಖಾಳನ್ನು ರಾತ್ರಿಯ ವೇಳೆ ಉಣ್ಣೆ ಶಾಲಿನಲ್ಲಿ ತುರುಕಿ ಸುತ್ತಿ ಜಮುನಾ ನದಿಗೆ ಎಸೆದು ಬಂದರು ಇದನ್ನು ಹೇಳುವ ಮುಖೇನ ಹೆಣ್ಣುಗಳ ಶೋಷಣೆ, ದೌರ್ಜನ್ಯ ಮತ್ತು ತಂದೆ ತಾಯಿಗಳು ಅನುಭವಿಸುವ ಯಾತನೆಯನ್ನು ಚಿತ್ರಿಸಿರುವುದನ್ನು ನಾವು ಗಮನಿಸಬಹುದಾಗಿದೆ.

"ಮರಳಿ ಬದುಕಿಗೆ ಈ ಪಯಣ" ಎಂಬ ಕಥೆಯಲ್ಲಿ ಸುಧಾಳ ಬಗ್ಗೆ ಐ ಆಮ್ ಸಾರಿ ಎಂದು ಹೇಳುತ್ತಾ ವೈದ್ಯರು ಮಿಸ್ಟರ್ ರಿಪುದಮನ್ ಸಿಂಗ್‌ರವರಿಗೆ ಆಕೆ ಉಳಿಯುವ ಯಾವ ಭರವಸೆಯನ್ನು ನರ್ಸಿಂಗ್ ಹೋಂ ನಲ್ಲಿ ನೀಡಲಿಲ್ಲ ಆದರೆ ಆತ್ಮ ವಿಶ್ವಾಸ ಮತ್ತು ಪ್ರಯತ್ನದ ಹಿನ್ನಲೆಯಲ್ಲಿ ರಿಪುದಮನ್ ಸಿಂಗ್ ತನ್ನವಳನ್ನು ಉಳಿಸುವ ವಿಚಾರವನ್ನು ಕಥೆಗಾರ್ತಿ ಎತ್ತಿಹಿಡಿಯುತ್ತಾರೆ. ಪುರುಷ ಪ್ರಾಧಾನ್ಯ ಸಮಾಜದಲ್ಲಿ ಮರುಮದುವೆಯ ಚಿತ್ರಣವನ್ನು ತೋರದೆ ಆಪ್ತಳಾದ ಸುಧಾಳ ಬದುಕಿಗೆ ಹೊಸ ತಿರುವನ್ನು ತಂದುಕೊಡುವ ಮೂಲಕ ಸಮಾನತೆಯ ದೃಷ್ಟಿಕೋನವನ್ನು ಗಂಡು ಹೆಣ್ಣಿನ ನಡುವೆ ತರುವಂತಹ ಪ್ರಯತ್ನವನ್ನು ಮಾಡಿರುತ್ತಾರೆ ಎಂಬುದು ನನ್ನ ಅನಿಸಿಕೆಯಾಗಿದೆ.

"ನೀನಿರುವೆ ನಮ್ಮೊಡನೆ" ಎನ್ನುವ ಕಥೆಯಲ್ಲಿ ಚರಿತಳ ಗಂಡನಾಗಿ ಹಾಗೂ ಪುಟ್ಟಿಗೆ ತಂದೆಯಾದ ರವಿಯು ರಿಪೆಟಿಟಿವ್ ಸ್ಟ್ರೇನ್ ಇಂಜ್ಯೂರಿ, ಒಂದು ತೆರೆನಾದ ಮೆದುಳಿನ ಗಡ್ಡೆಗಳು ಎಂಬ ಕಾಯಿಲೆಗೆ ತುತ್ತಾದ ರವಿಯನ್ನು ಬದುಕಿಸಿಕೊಳ್ಳುವ ಹೋರಾಟದಲ್ಲಿ ತಾನು ಸೋಲುವ ಮುಖೇನ ಓರ್ವ ಹೆಣ್ಣಾಗಿ ತನ್ನ ಪತಿಯಾದ ರವಿಯ ನೆನಪುಗಳಲ್ಲಿಯೇ ತನ್ನ ಬದುಕನ್ನು ಸಾಗಿಸುವ ಮೂಲಕ ಮಗಳಾದ ಪುಟ್ಟಿಯನ್ನು ಸಾಕುವ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾಳೆ. ಸಮಾಜಕ್ಕೆ ಹೆದರದೆ ಜೀವನವನ್ನು ಸಾಗಿಸಲು ದಿಟ್ಟ ಹೆಜ್ಜೆಯನ್ನು ಇಡುವ ಹೆಣ್ಣಿನ ಕಥೆಯನ್ನು ಚಿತ್ರಿಸುವ ಪ್ರಯತ್ನವನ್ನು ಇಲ್ಲಿ ಕಥೆಗಾರ್ತಿ ಮಾಡಿರುತ್ತಾರೆ.

"ಕಪ್ಪು ಮೋಡ, ಬೆಳ್ಳಿ ಅಂಚು" ಎಂಬ ಕಥೆಯಲ್ಲಿ ಮಧುವಿನ ಪತಿಯಾದ ಹಾಗೂ ಪುಟ್ಟಿಯ ರವಿಯು ಬೇರೆ ಹೆಣ್ಣಿನ ಮೋಹಕ್ಕೆ ಒಳಗಾಗಿ ಆಕೆಯನ್ನು ತಾನು ವಿವಾಹ ಮಾಡಿಕೊಳ್ಳುವಂತೆ ಹೇಳಿದಾಗ, ಮೊದಮೊದಲಿಗೆ ಕುಸಿದು ಬಿದ್ದ ಮಧು ತನ್ನ ಗೆಳತಿಯಾದ ಶೀಲಾಳ ಪ್ರೇರೇಪಣೆಯ ಮಾತುಗಳಿಂದಾಗಿ ರವಿ ಇಲ್ಲದೆ ನಾನು ಬದುಕನ್ನು ನಡೆಸಲಾರೆ ಎಂಬುದಾಗಿ ಹೆದರಿದ್ದಳು. ಆದರೆ ಆತ ನನಗೆ ಮೋಸ ಮಾಡಿದ ಎಂಬುದಾಗಿ ನೋವಿನಲ್ಲಿಯೇ ಬಳಲುತ್ತಿದಂತಹ, ಹೆಣ್ಣು ಕೊನೆಗೆ ದೃಢವಾದ ಆತ್ಮ ನಿರ್ಧಾರವನ್ನು ಕೈಗೊಳ್ಳುವ ಮೂಲಕ ಒಬ್ಬ ಬಹುದೊಡ್ಡ ಉದ್ಯಮಿಯಾಗಿ, ತನ್ನ ಮಗಳ ಭವಿಷ್ಯವನ್ನು

ರೂಪಿಸುವಲ್ಲಿ ಮುಂದಾಗುವ ಚಿತ್ರಣವು ಪತಿ ಇಲ್ಲದ ಬದುಕು ಶೂನ್ಯ ಎಂಬುದಾಗಿ ಅರಿಯದೆ ತಾನೂ ಕೂಡ ಸಮಾಜದಲ್ಲಿ ಸರಿಸಮಾನವಾದ ಸ್ಥಾನ-ಮಾನ ಪಡೆಯಬಲ್ಲೆ ಎಂಬುದನ್ನು ಚಿತ್ರಿಸಿರುತ್ತಾರೆ.

ನೇಮಿಚಂದ್ರರವರ ಇತರೆ ಕಥೆಗಳಾದ ನೆನ್ನೆಗಳ ಹೊರೆಇಳಿಸಿ, ತಣ್ಣನೆಯ ಕಣಿವೆಯಲಿ ಒಂದು ಪ್ರೀತಿಯ ಕನಸು, ಬದುಕು ಕಾಯುವುದಿಲ್ಲ, ಇತಿಹಾಸದಂಚಿನಲಿ...., ನನ್ನದೆಯ ಕದನದಲಿ ನೆನಪಿನಂಗಳದಲ್ಲಿ ನೂರು ಚಿತ್ತಾರ, ಬದುಕು ನಿನ್ನಲ್ಲೆಂತಾ ಮುನಿಸು, ಕಳೆಯಬೇಕಿದೆ ನಿನ್ನ ಜೊತೆಯಲಿ ಒಂದು ಶ್ಯಾಮಲ ಸಂಜೆ, ನೆನಪುಗಳು ನೋಯಲಿಲ್ಲ, ಮತ್ತೆ ಬರೆದ ಕವನಗಳು, ಸಾವಿನತ್ತ ಒಂದು ಹೆಜ್ಜೆ, ನೀವು ಕಾಣದ ನಾಳೆಗಳಲ್ಲಿ... ಹೊಸ ಹುಟ್ಟು, ಏನೊಂದು ಆಗದವರು, ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಸಂಜೆಗಳು ಎಷ್ಟು ಸುಂದರ, ತೆರೆಗಳು ಸರಿದವು, ತ್ರಿಕೋನದಾಚೆಗೆ, ಕೆಂಪು ಕಲಕಿದ ನೀರು, ಕರಗುವ ಕನಸುಗಳು, ಕನಸುಗಳಿಲ್ಲದ ಹಾದಿಯಲ್ಲಿ, ನೀಳ್ಗತೆ, ಎಲ್ಲಿ ನನ್ನ ಪಿಯರಿ... ಎಲ್ಲಿ ನನ್ನ ಪಿಯರಿ, ಇನ್ನು ಮುಂತಾದುವು ಆಗಿದೆ.

ಅಭಿಪ್ರಾಯ: ನೇಮಿಚಂದ್ರರವರು ತಮ್ಮ ಕಥೆಗಳಲ್ಲಿ ಹೆಣ್ಣು ಮಕ್ಕಳು ಸಮಾಜದಲ್ಲಿ ತಮ್ಮ ಬದುಕನ್ನು ಸಾಗಿಸುವ ಮೂಲಕ ಪರಿಪೂರ್ಣ ಅರ್ಥವನ್ನು ಕಂಡುಕೊಳ್ಳಬೇಕು. ಪುರುಷ ಪ್ರಾಧಾನ್ಯ ಸಮಾಜದಲ್ಲಿ ತನಗೂ ಮಾನ್ಯತೆಯನ್ನು ದೊರಕಿಸಿಕೊಳ್ಳಲು ತನ್ನ ಅಂತರಾಳದ ವಿಚಾರಗಳನ್ನು ಕಥೆಗಳ ಮೂಲಕ ಹೇಳುವ ಪ್ರಯತ್ನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ನಾವು ನೋಡಬಹುದಾಗಿದೆ.

ಆಧುನಿಕ ಜಗತ್ತಿನಲ್ಲಿ ಸಮಾನತೆಯ ದೃಷ್ಟಿಕೋನ ಮತ್ತು ಘನತೆ ಗೌರವಗಳಿಂದ ಬದುಕುವ ಪ್ರಯತ್ನವನ್ನು ಮಾಡುವ ಪಥದೆಡೆಗೆ ಸಾಗುವುದನ್ನು ಗುರ್ತಿಸುವುದಾಗಿದೆ. ಸಮಾಜದಲ್ಲಿ ಹೆಣ್ಣಿನ ಬಗ್ಗೆ ಇರುವ ನಕಾರಾತ್ಮಕ ವಿಚಾರಗಳಿಗೆ ಒತ್ತು ಕೊಡುವ ಮುಖೇನ ಓರ್ವ ಸ್ತ್ರೀ ವಾದಿಯಾಗಿ ತನ್ನ ಕಥೆಗಳ ಮೂಲಕ ಸ್ತ್ರೀ ಸಮಾನತೆಯನ್ನ ತರುವಲ್ಲಿ ಸ್ತ್ರೀಯರ ಕೆಲವು ವಿಚಾರಗಳನ್ನು ಸಹೃದಯರ ಮನಮುಟ್ಟುವಂತೆ ಹೇಳಿರುವುದನ್ನು ನಾವು ನೇಮಿಚಂದ್ರರವರ ಕಥಾಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಪೂರಕ ಆಕರ ಗ್ರಂಥಗಳು:

1. ನೇಮಿಚಂದ್ರ, 2001, ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು.
2. ಸಂಕಥನ- ಕರೀಗೌಡ ಬೀಚನಹಳ್ಳಿ, ಪ್ರಕಾಶಕರು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು -02, 2000.
3. ಕಥೆಗಳ ವಿಮರ್ಶೆ- ಹೆಚ್.ಎಸ್.ರಾಘವೇಂದ್ರರಾವ್ -2000.
4. ವರ್ತಮಾನದ ಕಥೆಗಳು- ಬೈರಮಂಗಲ ರಾಮೇಗೌಡ, ಕಂಡನಾಡಿಗ ನಾರಾಯಣ, ಕನ್ನಡ ಸಾಹಿತ್ಯ. ಪರಿಷತ್ತು-2011.
5. ಅಮರೇಶ ನುಗಡೋಣಿ, 2014, ಕಥೆ ಹುಟ್ಟುವ ಪರಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
6. ನೇಮಿಚಂದ್ರ- ಸಾವೇ ಬರುವುದಿದ್ದರೆ ನಾಳೆ ಬಾ : ನವ ಕರ್ನಾಟಕ ಪಬ್ಲಿಕೇಷನ್, -2015
7. ನೇಮಿಚಂದ್ರ ಬದುಕು ಬದಲಿಸಬಹುದು - ನವ ಕರ್ನಾಟಕ ಪಬ್ಲಿಕೇಷನ್.
8. ಸ್ತ್ರೀವಾದ ಪದವಿವರ ಕೋಶ- ಹೆಚ್.ಎಸ್ ಶ್ರೀಮತಿ 2018, ಅಭಿನವ, ವಿಜಯನಗರ ಬೆಂಗಳೂರು.
9. ಸ್ತ್ರೀವಾದಿ ಮನೋವಿಜ್ಞಾನ- ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ- ಹಂಪಿ, 2009.